ಸಚಿವರ ಹೇಳಿಕೆ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಖಾಸಗೀ ವಿಮಾನ ಅನಧಿಕೃತವಾಗಿ ಬಂದಿಳಿದಿರುವ ಬಗ್ಗೆ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರಾಗಿರತಕ್ಕಂಥ ಶಿವರಾಮೇಗೌಡರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಸದನಕ್ಕೆ ಉತ್ತರವನ್ನು ಕೊಡಿಸುತ್ತೇನೆ ಎನ್ನುವಂಥ ಭರವಸೆಕೊಟ್ಟ ಮೇರೆಗೆ ತಮ್ಮ ಒಂದು ಅನುಮತಿಯನ್ನು ಕೋರಿ ಈ ಒಂದು ಹೇಳಿಕೆಯನ್ನು ಸದನದ ಮುಂದೆ ಇಡಲು ಬಯಸುತ್ತೇನೆ.

"Today at about 8.00 A.M. a small aircraft called jet Falcon 900 bearing register No.9 MBAD belonging to a private company from Kaulalampur landed at Bangalore airport with three crew members and the following four passengers:

Ananda Krishnan; Sowrama Appuswamy, Abdul Kalimalias- Abdul Hamid and Chowmeowheng.

These passengers are said to be scientists who came to visit ISRO, Bangalore. As the aircraft landed in a different place there was some confusion in clearing these passengers by the Immigration and Customs officials. The formalities, however, have been fulfilled. The scientists have visited ISRO and have returned to Bangalore Airport. They are scheduled to go to Delhi this evening.

ಆದುದರಿಂದ ಯಾವುದೇ ಸದಸ್ಯರಿಗೂ ಇದರ ಬಗ್ಗೆ ಆತಂಕವಾಗುವ ಅವಶ್ಯಕತೆ ಏನೂ ಇಲ್ಲ, ಈ ಸರ್ಕಾರ ಅಂತಹ ಆತಂಕಕಾರಿ ಪರಿಸ್ಥಿತಿಯನ್ನು ತರುವುದಕ್ಕೆ ಬಿಡುವುದಿಲ್ಲ, ಈ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

1995-96ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದುದು)

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೇ, ಇವೊತ್ತು ನಾವು 1995-96ನೇ ಸಾಲಿನ ಶಿಕ್ಷಣ, ಯುವಜನ ಸೇವೆ, ಕಾರ್ಮಿಕ, ವಿದ್ಯುತ್ ಯೋಜನೆ, ಕೃಷಿ, ಪಶು ಸಂಗೋಪನೆ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡುತ್ತಿದ್ದೇವೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ, ಹೊಸ ಮಂತ್ರಿಗಳೂ ಬಂದಿದ್ದಾರೆ. ಹೊಸ ನೀತಿ ಪ್ರಕಟವಾಗಬೇಕಾಗಿತ್ತು. ಆದರೆ ಅಧಿಕಾರಿಗಳೆಲ್ಲ ಹಿಂದಿನ ಸರ್ಕಾರದಲ್ಲಿ ಇದ್ದವರೇ ಅಂದರೆ ಬಾಟಲ್ ಹೊಸದು ಮದ್ಯ ಮತ್ರ ಹಳೆಯದೇ ಎನ್ನುವ ಮಾತನ್ನು ಹೇಳಿದರ ತಪ್ಪಾಗಲಿಕ್ಕಿಲ್ಲ, ಹಿಂದಿನ ಸರ್ಕಾರದ ಲೋಪದೋಷಗಳನ್ನೆಲ್ಲಾ ಹೇಳಿಕೊಂಡು ನಾವು ಆಯ್ಕೆಯಾಗಿ ಬಂದಿದ್ದೇವೆ. ಈ ಸದನದಲ್ಲಿ ಒಟ್ಟು 110 ಜನ ಹೊಸದಾಗಿ ಆಯ್ಕೆಯಾಗಿ ಬಂದಿದ್ದೇವೆ. ಹೊಸ ಸ್ಫೂರ್ತಿ, ಹೊಸ ಕಲ್ಪನೆ, ಹೊಸ ಉದ್ದೇಶದಿಂದ ಈ ಸದನವನ್ನು ಪ್ರವೇಶ ಮಾಡಿದ್ದೇವೆ. ಕಳೆದ ಹಲವಾರು